(ಈ) ಖಾಲಿ ಇರುವ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಗಳನ್ನು ಯಾವ ಕಾಲಮಿತಿಯಲ್ಲಿ ನಿಯೋಜನೆ ಮಾಡಲಾಗುವುದು? (ಮಾಹಿತಿ ನೀಡುವುದು)

ಶ್ರೀ ಸಿ. ಟಿ. ರವಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):–

(ಅ) ಬಂದಿದೆ

(ಆ) ಬಿ.ಎ:– ಹೆಚ್.ಇ.ಪಿ; ಹೆಚ್.ಇ.ಎಸ್. ಮತ್ತು ಹೆಚ್.ಇ.ಕೆ. ಬಿ.ಎಸ್ಸಿ:– ಪಿ.ಎಂ.ಸಿ.ಎಸ್.

ಮಂಜೂರಾಗಿರುವ ಒಟ್ಟು ಬೋಧಕ ಸಿಬ್ಬಂದಿ	...	14
ಮಂಜೂರಾಗಿರುವ ಒಟ್ಟು ಬೋಧಕೇತರ ಸಿಬ್ಬಂದಿ	...	14
ನಿಯೋಜಿಸಲಾಗಿರುವ ಉಪನ್ಯಾಸಕರು	...	03
(ಇ) ಖಾಲಿ ಇರುವ ಖಾಯಂ ಉಪನ್ಯಾಸಕರ ಸಂಖ್ಯೆ	..	03
ಖಾಲಿ ಇರುವ ಬೋಧಕೇತರರ ಸಂಖ್ಯೆ	...	04

(ಈ) ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಸಂಖ್ಯೆ: ಆಇ 01 ಬಿಇಎಂ 2012 ದಿನಾಂಕ 14–06–2012 ಹಾಗೂ ಸಂಖ್ಯೆ: ಆಇ 01 ಬಿಇಎಂ 2008 ದಿನಾಂಕ 21–10–2009ರ ಸುತ್ತೋಲೆಗಳಲ್ಲಿ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಹೊಸ ಬೋಧಕೇತರ ಹುದ್ದೆಗಳನ್ನು ಸೃಜಿಸುವ/ಭರ್ತಿ ಮಾಡುವುದನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ. ಮಿತವ್ಯಯ ಆದೇಶ ಹಿಂಪಡೆದ ನಂತರ ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದು.

ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳು

236 (894) **ಶ್ರೀ ಖಾದರ್ ಯು.ಟಿ. (ಮಂಗಳೂರು):–** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸಾಂಕ್ರಾಮಿಕ ರೋಗಗಳು ಯಾವುವು; ಈ ರೋಗಗಳಿಂದ ಇದುವರೆವಿಗೂ ಎಷ್ಟು ಜನ ಪ್ರಾಣ ಕಳೆದುಕೊಂಡಿದ್ದಾರೆ; (ವಿವರ ನೀಡುವುದು)

(ಆ) ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ; (ವಿವರ ನೀಡುವುದು)

(ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಂಕ್ರಾಮಿಕ ರೋಗಗಳ ಪತ್ತೆಯಾಗಿವೆಯೇ? (ವಿವರ ನೀಡುವುದು)

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

(ಅ) ಕರುಳುಬೇನೆ, ಕಾಲರಾ, ಅರಶಿನ ಕಾಮಾಲೆ, ವಿಷಮಶೀತಜ್ವರ, ಇಲಿ ಜ್ವರ, ಮಂಗನಕಾಯಿಲೆ, ಹೆಚ್1ಎನ್1 ಇವು ಸಾಂಕ್ರಾಮಿ ರೋಗಗಳಾಗಿವೆ.

ರಾಜ್ಯದಲ್ಲಿ ಜನವರಿ 2012ರಿಂದ ಮೇ–2012ರವರೆಗೆ ಸದರಿ ಸಾಂಕ್ರಾಮಿಕ ರೋಗಗಳಿಂದ ಮರಣ ಹೊಂದಿದವರ ಸಂಖ್ಯೆ ಈ ಕೆಳಕಂಡಂತಿವೆ;

ರೋಗಿಗಳು		ಮೃತರಾದವರು
ಕರುಳುಬೇನೆ	...	13
ಕಾಲರಾ	...	ಇಲ್ಲ
ಅರಶಿನ ಕಾಮಾಲೆ	...	03
ವಿಷಮಶೀತಜ್ವರ	...	ಇಲ್ಲ
ಇಲಿಜ್ವರ	...	01
ಮಂಗನಕಾಯಿಲೆ	...	01
ಹೆಚ್1ಎನ್1	...	20

(ಆ) ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕುರಿತಂತೆ ಸರ್ಕಾರವು ತೆಗೆದುಕೊಂಡ ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ.

(ಇ) ಜನವರಿ–2012 ರಿಂದ ಮೇ–2012ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪತ್ತೆಯಾದ ಸಾಂಕ್ರಾಮಿಕ ರೋಗಗಳ ವಿವರಗಳು ಕೆಳಕಂಡಂತಿವೆ;

ರೋಗಿಗಳು	ಒಟ್ಟು ಪ್ರಕರಣ	ಮೃತರಾದವರು
ಕರುಳುಬೇನೆ	21	ಇಲ್ಲ
ಕಾಲರಾ	00	ಇಲ್ಲ
ಅರಶಿನ ಕಾಮಾಲೆ	14	ಇಲ್ಲ
ವಿಷಮಶೀತಜ್ವರ	96	ಇಲ್ಲ
ಇಲಿಜ್ವರ	24	ಇಲ್ಲ
ಮಂಗನಕಾಯಿಲೆ	00	ಇಲ್ಲ
ಹೆಚ್1ಎನ್1	06	01

ಅನುಬಂಧ

ರಾಜ್ಯದಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಕುರಿತಂತೆ ಸರ್ಕಾರವು ತೆಗೆದುಕೊಂಡ ಕ್ರಮದ ವಿವರಗಳು

1) ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕಾಲಕಾಲಕ್ಕೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ನೀಡಲಾಗಿದೆ.

2) ಭಾರಿ ಮಳೆ/ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ಹಾಗೂ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳಲು ಸುತ್ತೋಲೆಯನ್ನು ಕಳುಹಿಸಲಾಗಿದೆ.

3) ಎಲ್ಲಾ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆ ಸನ್ನದ್ಧವಾಗಿದ್ದು, ಸಾಂಕ್ರಾಮಿಕ ರೋಗಗಳು ಕಂಡು ಬಂದಲ್ಲಿ ಕೂಡಲೇ ನಿಯಂತ್ರಣಾ ಕಾರ್ಯಕ್ಕೆ ನೆರವಾಗಲಿವೆ. ಅಲ್ಲದೆ ರೋಗ ಪೀಡಿತ ಪ್ರದೇಶಗಳಲ್ಲಿ ಸಂಚಾರಿ ಚಿಕಿತ್ಸಾ ತಂಡಗಳೂ ಸಹ ಕಾರ್ಯನಿರ್ವಹಿಸುತ್ತಿವೆ.

4) ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳ ಇತರೆ ಇಲಾಖಾಧಿಕಾರಿಗಳ ಸಮನ್ವಯ ಸಮಿತಿಯನ್ನು ಕ್ರಮವಾಗಿ ಜಿಲ್ಲಾಧಿಕಾರಿಗಳ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ರಚಿಸಿ, ಸಭೆಗಳನ್ನು ಕರೆದು, ಪರಿಸ್ಥಿತಿಯ ಪರಿವೀಕ್ಷಣೆ, ಅಧ್ಯಯನ ಹಾಗೂ ಕಾರ್ಯತಂತ್ರ ರೂಪುರೇಶೆಗಳನ್ನು ಯೋಜಿಸಿ, ಅನುಷ್ಠಾನಗೊಳಿಸಲಾಗಿದೆ.

5) ಎಲ್ಲಾ ಕುಡಿಯುವ ನೀರಿನ ಮೂಲಗಳ ನೀರನ್ನು ಪರೀಕ್ಷಿಸಿ ಯೋಗ್ಯವಲ್ಲದ ಮೂಲಗಳನ್ನು ಸೂಪರ್ ಕ್ಲೋರಿನೇಷನ್ ಮಾಡಲಾಗುತ್ತಿದೆ.

6) ಕುಡಿಯುವ ನೀರನ್ನು ಮನೆಗಳಲ್ಲಿಯೇ ಶುದ್ಧೀಕರಿಸಲು ಹಾಲೋಜನ್ ಮಾತ್ರಗಳನ್ನು ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಇಡುವುದಲ್ಲದೆ ಸಕಾಲದಲ್ಲಿ ಪೀಡಿತ ಪ್ರದೇಶಗಳಲ್ಲಿ ವಿತರಿಸಿ, ಸಮುದಾಯಕ್ಕೆ ಬಳಸುವ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

7) ಸಾಂಕ್ರಾಮಿಕ ರೋಗಳಿಗೆ ಚಿಕಿತ್ಸೆ ನೀಡಲು ಅವಶ್ಯವಿರುವ ಔಷಧಿಗಳ ದಾಸ್ತಾನು ಲಭ್ಯವಿದೆ.

8) ರೋಗ ನಿಯಂತ್ರಣ ಕಾರ್ಯವನ್ನು ಮತ್ತು ಜನರಿಗೆ ಆರೋಗ್ಯ ಶಿಕ್ಷಣವನ್ನು ನಿರಂತರವಾಗಿ ಮಾಡಲಾಗುತ್ತಿದೆ.